# ತೆರೆಯ ಮೇಲೆ ಪಿಗ್ಗಿ ಜೀವನ

ಕಲಾವಿದರು, ಕ್ರೀಡಾಪಟುಗಳ ಬದುಕನ್ನು ತೆರೆಗೆ ತರುವುದೆಂದರೆ ಬಾಲಿವುಡ್‌ಗೆ ಇನ್ನಿಲ್ಲದ ಆಸಕ್ತಿ. ತೀರಾ ಹಳೆಯ ಸಾಧಕರೇ ಆಗಬೇಕೆಂದಿಲ್ಲ. ಇನ್ನೂ ಚಾಲ್ತಿಯಲ್ಲಿರುವ ಖ್ಯಾತನಾಮರ ಬದುಕನ್ನೂ ಸಿನಿಮಾಕ್ಕಿಳಿಸುವ ಆಸೆಯಿಂದ ಜಾಲಾಡುತ್ತಿದ್ದಾರೆ ಬಾಲಿವುಡ್ ಮಂದಿ. ಈಗ ಆ ಪಟ್ಟಿಗೆ ಸೇರ್ಪಡೆ ಆಗಿರುವುದು ಪ್ರಿಯಾಂಕಾ ಚೋಪ್ರಾ.

ಪ್ರಿಯಾಂಕಾ ಮಾಡೆಲಿಂಗ್ ಜಗತ್ತಿನಲ್ಲಿದ್ದಾಗ ಆತ್ಮೀಯರಾಗಿದ್ದ ಅಸೀಮ್ ಮರ್ಚೆಂಟ್ ಆಕೆಯ ಬದುಕಿನ ಕಥೆಯನ್ನು ಸಿನಿಮಾ ರೂಪಕ್ಕೆ ತರುವ ಯೋಚನೆಯಲ್ಲಿದ್ದಾರಂತೆ. 'ವಾಂಟೆಡ್' ಚಿತ್ರದಲ್ಲಿ ಪುಟ್ಟ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದರು ಅಸೀಮ್. ಈ ಸುದ್ದಿಯಿಂದ ಪ್ರಿಯಾಂಕಾ ಪುಳಕಿತರಾಗಿದ್ದಾರಂತೆ. 'ಪ್ರಯತ್ನದ ಬಗ್ಗೆ ನನ್ನ ತಕರಾರೇನೂ ಇಲ್ಲ. ಆದರೆ ಅದು ಸೂಕ್ತ ಸಮಯಕ್ಕೆ ಬರಬೇಕಷ್ಟೇ, ಇಷ್ಟು ಬೇಗ ಅಲ್ಲ' ಎಂದಿದ್ದಾರೆ ಪ್ರಿಯಾಂಕಾ. 'ದೊಡ್ಡ ವ್ಯಕ್ತಿಗಳ ಬದುಕನ್ನು ಸಿನಿಮಾ ಮಾಡಲಾಗುತ್ತಿದೆ. ಅದು ಖುಷಿಯ ವಿಚಾರ. ಆದರೆ ಅವರ ಸಾಲಿನಲ್ಲಿ ಕಾಣಿಸಿಕೊಳ್ಳುವಷ್ಟು ನಾನು ದೊಡ್ಡವಳಲ್ಲ' ಎಂದೂ ಆಕೆ ಹೇಳಿದ್ದಾರೆ.

ಚಿತ್ರ ಪ್ರಿಯಾಂಕಾರ ಮಾಡೆಲಿಂಗ್ ಜೀವನದ ಬಗ್ಗೆ ಹೆಚ್ಚು ಬೆಳಕು ಚೆಲ್ಲಲಿದ್ದು, ಪ್ರಿಯಾಂಕಾ ಮತ್ತು ಆಕೆಯ ಮಾಜಿ ಮ್ಯಾನೇಜರ್ ಪ್ರಕಾಶ್ ಜಾಜು ನಡುವಿನ ಕಾನೂನು ಸಮರವನ್ನೂ ಒಳಗೊಳ್ಳಲಿದೆ-ಯಂತೆ. ಚಿತ್ರದ ವಿವರಗಳು ಇನ್ನೂ ಅಂತಿಮಗೊಂಡಿಲ್ಲ. ಸದ್ಯಕ್ಕೆ ಪಿಗ್ಗಿ, ಬಾಕ್ಸರ್ ಮೇರಿ ಕೋಮ್ ಜೀವನಗಾಥೆಯ ಚಿತ್ರದಲ್ಲಿ ಬ್ಯುಸಿ.





# ಅದಿತಿ- ಸಿದ್ಧಾರ್ಥ್ ಜೊತೆ ಜೊತೆಯಲಿ



ರಣಬೀರ್ ಕಪೂರ್‌ಗೆ ಪ್ರತಿಸ್ಪರ್ಧಿ ಯಾರೆಂದರೆ ಅದು ಸಿದ್ಧಾರ್ಥ್ ಮಲ್ಹೋತ್ರಾ ಎನ್ನುತ್ತಿದೆ ಬಿ-ಟೌನ್. ಈ ಪೈಪೋಟಿ ನಟನೆಯಲ್ಲಲ್ಲ. ಸುಂದರಿಯರ ಜೊತೆ ಸುತ್ತಾಟದಲ್ಲಿ! ನಟಿಸಿರುವುದು ಎರಡೇ ಸಿನಿಮಾಗಳಲ್ಲಿ ಆದರೂ ಸಿದ್ಧಾರ್ಥ್ ಆಗಲೇ ಮೂವರು ನಟೀಮಣಿಯರೊಂದಿಗೆ ತೆಕ್ಕೆ ಹಾಕಿಕೊಂಡು ಓಡಾಡಿದ್ದಾರೆ.

ಚೊಚ್ಚಲ ಚಿತ್ರ 'ಸ್ಟೂಡೆಂಟ್ ಆಫ್ ದಿ ಇಯರ್' ವೇಳೆ ಸಿದ್ಧಾರ್ಥ್ ಹೆಸರು ಸಹ ನಟಿ ಅಲಿಯಾ ಭಟ್ ಜೊತೆ ಕೇಳಿಬಂದಿತ್ತು. ಕೆಲವೇ ದಿನಗಳಲ್ಲಿ ನಟಿ ಇಸಬೆಲ್ಲ ಲೀಟೆ ಸಂಗಡ ಸಿದ್ಧಾರ್ಥ್ ಪ್ರೇಮಪುರಾಣ ಶುರುವಾಗಿತ್ತು. ಇಸಬೆಲ್ಲ 'ಪುರಾನಿ ಜೀನ್ಸ್'ನಲ್ಲಿ ಬಿಜಿಯಾದ ಕಾರಣಕ್ಕೋ ಏನೋ ಇವರಿಬ್ಬರ ಗೆಳೆತನ ನಂತರ ಅಷ್ಟು ಸುದ್ದಿ ಮಾಡಲಿಲ್ಲ.

ಅದರ ಬೆನ್ನಲ್ಲೇ ಶ್ರದ್ಧಾ ಕಪೂರ್ ಜೊತೆಗೂ ಸಿದ್ ಪ್ರೇಮ್ ಕಹಾನಿ ಶುರು ಹಚ್ಚಿಕೊಂಡಿದ್ದರು. 'ಹಸೀ ತೋ ಫಸಿ' ಚಿತ್ರದ ಸಂದರ್ಭದಲ್ಲಿ ಸಿದ್ ಮೇಲೆ ಕ್ರಶ್ ಆಗಿತ್ತು ಎಂದು ಪರಿಣೀತಿ ಚೋಪ್ರಾ ಹೇಳಿಕೊಂಡಿದ್ದರು. ಈಗ ಅವರ ಪ್ರೇಮ ಗಮನ ಅದಿತಿ ರಾವ್ ಹೈದರಿ ಕಡೆ ತಿರುಗಿದೆಯಂತೆ. ಐಐಎಫ್‌ಎ ಪ್ರಶಸ್ತಿ ಕಾರ್ಯಕ್ರಮಕ್ಕೆಂದು ಫ್ಲೋರಿಡಾಕ್ಕೆ ತೆರಳಿದ್ದಾಗ ಇಬ್ಬರೂ ಗಂಟೆಗಟ್ಟಳೆ ಸುತ್ತಾಡಿದರಂತೆ.

■ ಅಮಿ